

# ಮಕ್ಕಳಿಗೆ ಸುರಕ್ಷಿತ ಜಲಪಾತಗಳು

ಚಿತ್ರ–ಲೇಖನ:
**ದೇವರು ಆರ್. ಭಟ್ಟ ಕಲಗಾರು**

ಮಕ್ಕಳಿಗೆ, ವೃದ್ಧರಿಗೆ, ಅಶಕ್ತರಿಗೆ ನೀರಿನಲ್ಲಿ ಆಟವೆಂದರೆ ಕೃತಕ ಫ್ಯಾಂಟಸಿ ಪಾರ್ಕ್, ದೋಣಿ ವಿಹಾರಗಳಿಗೆ ಸೀಮಿತ. ಇವುಗಳ ಹೊರತಾಗಿ ಮಕ್ಕಳಿಗೆ ಅಪಾಯವನ್ನು ತಂದೊಡ್ಡದ ಸಹಜ ರಮ್ಯ ತಾಣಗಳಲ್ಲಿ ಆಡುವ ಭಾಗ್ಯ ಎರಡು ಪುಟ್ಟ ಜಲಪಾತಗಳಿವೆ. ಅವುಗಳಲ್ಲಿ ಒಂದು ಹೂಸೂರು – ನಿಪ್ಲಿ ಡ್ಯಾಂ ಫಾಲ್ಸ್.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಸಿದ್ದಾಪುರ ಮಾವಿನಗುಂಡಿ – ಜೋಗ ಮಾರ್ಗದಲ್ಲಿ ಸಿಗುವ ಹಲಗೇರಿ ಯಿಂದ ಆಡುಕಟ್ಟಾ ಮಾರ್ಗದಲ್ಲಿ ಒಂದು ಕಿ.ಮೀ. ಕ್ರಮಿಸಿದರೆ ನಿಪ್ಲಿ. ಇಲ್ಲಿ ಅರಣ್ಯ ಇಲಾಖೆಯ ನರ್ಸರಿಗಾಗಿ ನಿರ್ಮಿಸಿರುವ ಡ್ಯಾಂ – ಹಾಗೂ ಇದರ ಕೆಳಭಾಗದಲ್ಲಿ ಹರಿಯುವ ಹೊಳೆಯು ಉಂಟು ಮಾಡುವ ಜಲಪಾತ ಅತ್ಯಂತ ರಮಣೀಯವಾಗಿದೆ. ಯಾವುದೇ ದೊಡ್ಡ ಜಲಪಾತಗಳ ರೌದ್ರತೆ ರಮ್ಯತೆಗಳಿಗೆ ಕಡಿಮೆ ಇಲ್ಲದ ಈ ಜಲಪಾತದ ಮೇಲ್ಭಾಗದಲ್ಲಿ ವಿಶಾಲವಾದ ಬಯಲು, ಅದರ ಅಂಚಿನಲ್ಲಿ ವಿಸ್ತಾರವಾಗಿ ಹರಿಯುವ ಹೊಳೆಯಲ್ಲಿ ಮಕ್ಕಳು ಮನಸೋ ಇಚ್ಛೆ ಆಡಬಹುದು. ಇದು ಹರವಾಗಿ ಹರಿದು ಆಳ ಮತ್ತು ರಭಸ ಕಡಿಮೆ ಇರುವುದರಿಂದ ಅಪಾಯದ ಸಾಧ್ಯತೆ ಕಡಿಮೆ. ನಂತರ ಉಂಟಾಗುವ ಜಲಪಾತವು ಸುಮಾರು 60–70 ಅಡಿಗಳಷ್ಟು ವಿಸ್ತಾರವಾಗಿ, 10–12 ಅಡಿ ಆಳಕ್ಕೆ ಧುಮುಕುತ್ತದೆ.

ಮಳೆಯ ನೀರನ್ನೇ ಆಶ್ರಯಿಸಿರುವ ಈ ಜಲಪಾತ ಮಳೆಗಾಲ ಕಳೆದು ಒಂದೆರೆಡು ತಿಂಗಳು ಮಾತ್ರ ತನ್ನ ವೈಭವವನ್ನು ಕಾಣುತ್ತದೆ. ಈ ಜಲಪಾತವನ್ನು ತಲುಪಲು ಮತ್ತೊಂದು ಮಾರ್ಗವಿದೆ. ರಾಷ್ಟ್ರೀಯ ಹೆದ್ದಾರಿ 206ರಲ್ಲಿ ತಾಳಗುಪ್ಪದಿಂದ 9 ಕಿ.ಮೀ. ದೂರದ ಆಡುಕಟ್ಟಾದಲ್ಲಿ ಹಲಗೇರಿಗೆ ಹೋಗುವ ಮಾರ್ಗದಲ್ಲಿ 8 ಕಿ.ಮೀ. ಕ್ರಮಿಸಿದರೆ ಎಡಭಾಗದ ಬಯಲಿನಲ್ಲಿ ನೂರೈವತ್ತು ಗಜ ದೂರದಲ್ಲಿ ಹೊಳೆ ಹಾಗೂ ಜಲಪಾತಕ್ಕೆ ಹೋಗಬಹುದು.

(8ನೇ ಪುಟ ನೋಡಿ)